Original Article
ISSN (Online): 2582-7472

ShodhKosh: Journal of Visual and Performing Arts
January 2024 5(1), 1017-1022

# ಮ್ಯಾಸಬೇಡ ಮತ್ತು ಕಾಡುಗೊಲ್ಲ ದೈವ ಸಂಬಂಧಗಳಲ್ಲಿ ಸಾಂಸ್ಕೃತಿಕ ಅನನ್ಯತೆ

# CULTURAL UNIQUENESS IN MASABEDE AND KADUGOLLA DIVINE RELATIONSHIPS

Dr. Palaiah P
Guest Lecturer, Department of Kannada, H.C.Boraiah Memorial SC/ST First Grade College, Jagalur.

**Corresponding Author**
Dr. Palaiah P

**DOI**
10.29121/shodhkosh.v5.i1.2024.2593

**Funding:** This research received no specific grant from any funding agency in the public, commercial, or not-for-profit sectors.

**Copyright:** © 2024 The Author(s). This work is licensed under a Creative Commons Attribution 4.0 International License.

With the license CC-BY, authors retain the copyright, allowing anyone to download, reuse, re-print, modify, distribute, and/or copy their contribution. The work must be properly attributed to its author.

## ABSTRACT

**English:** For the Masabede and Kadugolla tribes, 'God is the Panchaprana' is omniscient and worships innumerable gods. Originally, these two tribes belonged to the Vaishnava or Shaiva sect, which is an inextricable entanglement. Those who were herdsmen, who were nomads in search of grass and water in the past, are the gods placed in bamboo boxes to facilitate transportation. If we see that there are equal numbers of Shaiva and Vaishnava gods among the gods that they brought with them when they migrated, we can see the divine confluence of Shaiva and Vaishnava. The deities celebrated by Masabeders are Nalujaruva of Challakere taluk, Bosedeva of Bosedevarahatti, Peddathirumaladev of Bedreddihalli, Kampalarangaswamy of Kampaladevarahatti and others like Katamlingeshwar of Katappanahatti of Challakere taluk and Bommalinga of Gaurasamudra Deities such as Shvara, Pamudlu Gurunath of Pamudlu Bedag of Obanahalli, etc. are identified as important deities in this part. Similarly, Saha deities are also found in Kadugollar who are of Yadava descent. The deities they worship in the Challakere area are Kadarinarasimha Swami, Junjappa (the home deity of Kadigollar), Ettappa, Chittappa, Halappa, Chikkannaschami, Banjigere Eranna, Siddhaiah, Katappa, Iramuddappa, Nagappa, Bhutappa, Patappa, Kaytappa, Thimmappa, Chitradeva and others. Although identified as worshipers of Vishnu with the celebration, Saha is also identified as Saiva worshipers with the worship of Shaiva deities. Shiva worshipers wear Nama on their foreheads, Vishnu worshipers wear Vibhuti.

**Kannada:** ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಜನರಿಗೆ 'ದೇವರೆಂದರೆ ಪಂಚಪ್ರಾಣ' ಸರ್ವಚೇತನವಾದಿಗಳಾದ ಈ ಜನಾಂಗ ಅಸಂಖ್ಯಾತ ದೈವಗಳನ್ನು ಪೂಜಿಸುತ್ತಾರೆ. ಮೂಲತಃ ಈ ಎರಡು ಬುಡಕಟ್ಟುಗಳು ವೈಷ್ಣವ ಅಥವಾ ಶೈವ ಪಂಥದವರೆ ಎಂಬುದು ಬಿಡಿಸಲಾಗದ ಕಗ್ಗಂಟಾಗಿದೆ. ಪಶುಪಾಲಕರಾಗಿದ್ದ ಇವರು ಹಿಂದೆ ಹುಲ್ಲು ನೀರು ಹುಡುಕುತ್ತಾ ಅಲೆಮಾರಿಗಳಾಗಿದ್ದ ಇವರು ಸಂಚಾರ ಸಾಗಾಣಿಕೆಗೆ ಅನುಕೂಲವಾಗಲೆಂದು ಬಿದಿರು ಪೆಟ್ಟಿಗೆಗಳಲ್ಲಿ ಇಟ್ಟ ದೈವಗಳೇ ಪಡಟ್ಟಿಗೆ ದೇವರುಗಳಾಗಿವೆ. ವಲಸೆ ಬಂದಾಗ ತಮ್ಮ ಜೊತೆಯಲ್ಲೇ ತಂದ ದೇವರುಗಳಲ್ಲಿ ಶೈವ-ವೈಷ್ಣವ ದೈವಗಳೂ ಸಮ ಸಂಖ್ಯೆಯಲ್ಲಿ ಇರುವುದನ್ನು ನೋಡಿದರೆ ಶೈವ-ವೈಷ್ಣವಗಳ ದಿವ್ಯ ಸಂಗಮವನ್ನು ಕಾಣಬಹುದು. ಮ್ಯಾಸಬೇಡರು ಆಚರಿಸುವ ದೈವಗಳು ಚಳ್ಳಕೆರೆ ತಾಲ್ಲೂಕಿನ ನಲುಜರುವ ಓಬಳದೇವರು, ಬೋಸೆದೇವರಹಟ್ಟಿಯ ಬೋಸೆದೇವರು, ಬೇಡರೆಡ್ಡಿಹಳ್ಳಿಯ ಪೆದ್ದತಿರುಮಲದೇವರು, ಕಂಪಳದೇವರಹಟ್ಟಿಯ ಕಂಪಳರಂಗಸ್ವಾಮಿ ಇನ್ನೂ ಮುಂತಾದ ದೈವಗಳು ಈ ತಾಲ್ಲೂಕಿನಲ್ಲಿ ಪ್ರಮುಖವಾದ ದೈವಗಳಾಗಿ ಕಂಡುಬಂದರೆ, ಚಳ್ಳಕೆರೆ ತಾಲ್ಲೂಕಿನ ಕಾಟಪ್ಪನಹಟ್ಟಿಯ ಕಾಟಂಲಿಂಗೇಶ್ವರ, ಗೌರಸಮುದ್ರದ ಬೊಮ್ಮಲಿಂಗೇಶ್ವರ, ಓಬನಹಳ್ಳಿಯ ಪಾಮುಡ್ಲು ಬೆಡಗಿನ ಪಾಮುಡ್ಲು ಗುರುನಾಥ, ಇನ್ನೂ ಮುಂತಾದ ದೈವಗಳು ಈ ಭಾಗದಲ್ಲಿ ಪ್ರಮುಖ ದೈವಗಳಾಗಿ ಗುರುತಿಸಿಕೊಂಡಿವೆ. ಇದೇ ರೀತಿ ಯಾದವ ಸಂತತಿಯಿಂದ ಬಂದಂತ ಕಾಡುಗೊಲ್ಲರಲ್ಲೂ ಸಹಾ ದೈವಗಳು ಕಂಡುಬರುತ್ತವೆ. ಚಳ್ಳಕೆರೆ ಭಾಗದಲ್ಲಿ ಇವರು ಪೂಜಿಸುವ ದೈವಗಳು ಕದರಿನರಸಿಂಹ ಸ್ವಾಮಿ, ಜುಂಜಪ್ಪ (ಕರಡಿಗೊಲ್ಲರ ಮನೆದೇವರು), ಎತ್ತಪ್ಪ, ಚಿತ್ತಪ್ಪ, ಹಾಲಪ್ಪ, ಚಿಕ್ಕಣ್ಣಸ್ವಾಮಿ, ಬಂಜಿಗೆರೆ ಈರಣ್ಣ, ಸಿದ್ದಯ್ಯ, ಕಾಟಪ್ಪ, ಈರಮುದ್ದಪ್ಪ, ನಾಗಪ್ಪ, ಭೂತಪ್ಪ, ಪಾತಪ್ಪ, ಕ್ಯಾತಪ್ಪ, ತಿಮ್ಮಪ್ಪ, ಚಿತ್ರದೇವರುಇನ್ನೂ ಮುಂತಾದ ದೈವಗಳನ್ನು ಈ ಭಾಗದಲ್ಲಿ ಪೂಜಿಸುತ್ತಾರೆ.ಈ ರೀತಿಯ ದೈವಗಳನ್ನು ಆಚರಿಸುವುದರೊಂದಿಗೆ ವಿಷ್ಣು ಆರಾಧಕರಾಗಿ ಗುರುತಿಸಿಕೊಂಡರೂ ಸಹಾ ಇವರು ಶೈವದೈವಗಳನ್ನು ಪೂಜಿಸುವುದರೊಂದಿಗೆ ಶೈವ ಆರಾಧಕರಾಗಿಯು ಗುರುತಿಸಿಕೊಂಡಿದ್ದಾರೆ.ಶಿವನ ಆರಾಧಕರು ಹಣೆಗೆ ನಾಮವನ್ನು ಇಟ್ಟರೆ, ವಿಷ್ಣು ಆರಾಧಕರು ವಿಭೂತಿಯನ್ನು ಇಡುತ್ತಾರೆ.

**Keywords**: divine relationships, Cultural uniqueness

**How to cite this article (APA):** Nath, C., and Kumar, S. (2024). From Colonial Servitude to Contemporary Marginalisation: Exploring the Struggles of Assam's Adivasis and Tea Garden Workers. *ShodhKosh: Journal of Visual and Performing Arts, 5*(1), 1017-1022 DOI:10.29121/shodhkosh.v5.i1.2024.2593

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಜನರಿಗೆ 'ದೇವರೆಂದರೆ ಪಂಚಪ್ರಾಣ' ಸರ್ವಚೇತನವಾದಿಗಳಾದ ಈ ಜನಾಂಗ ಅಸಂಖ್ಯಾತ ದೈವಗಳನ್ನು ಪೂಜಿಸುತ್ತಾರೆ. ಮೂಲತಃ ಈ ಎರಡು ಬುಡಕಟ್ಟುಗಳು ವೈಷ್ಣವ ಅಥವಾ ಶೈವ ಪಂಥದವರೆ ಎಂಬುದು ಬಿಡಿಸಲಾಗದ ಕಗ್ಗಂಟಾಗಿದೆ. ಪಶುಪಾಲಕರಾಗಿದ್ದ ಇವರು ಹಿಂದೆ ಹುಲ್ಲು ನೀರು ಹುಡುಕುತ್ತಾ ಅಲೆಮಾರಿಗಳಾಗಿದ್ದ ಇವರು ಸಂಚಾರ ಸಾಗಾಣಿಕೆಗೆ ಅನುಕೂಲವಾಗಲೆಂದು ಬಿದಿರು ಪೆಟ್ಟಿಗೆಗಳಲ್ಲಿ ಇಟ್ಟ ದೈವಗಳೇ ಪಡಟ್ಟಿಗೆ ದೇವರುಗಳಾಗಿವೆ. ವಲಸೆ ಬಂದಾಗ ತಮ್ಮ ಜೊತೆಯಲ್ಲೇ ತಂದ ದೇವರುಗಳಲ್ಲಿ ಶೈವ-ವೈಷ್ಣವ ದೈವಗಳೂ ಸಮ ಸಂಖ್ಯೆಯಲ್ಲಿ ಇರುವುದನ್ನು ನೋಡಿದರೆ ಶೈವ-ವೈಷ್ಣವಗಳ ದಿವ್ಯ ಸಂಗಮವನ್ನು ಕಾಣಬಹುದು. ಮ್ಯಾಸಬೇಡರು ಆಚರಿಸುವ ದೈವಗಳು ಚಳ್ಳಕೆರೆ ತಾಲ್ಲೂಕಿನ ನಲುಜರುವ ಓಬಳದೇವರು, ಬೋಸೆದೇವರಹಟ್ಟಿಯ ಬೋಸೆದೇವರು, ಬೇಡರೆಡ್ಡಿಹಳ್ಳಿಯ ಪೆದ್ದತಿರುಮಲದೇವರು, ಕಂಪಳದೇವರಹಟ್ಟಿಯ ಕಂಪಳರಂಗಸ್ವಾಮಿ ಇನ್ನೂ ಮುಂತಾದ ದೈವಗಳು ಈ ತಾಲ್ಲೂಕಿನಲ್ಲಿ ಪ್ರಮುಖವಾದ ದೈವಗಳಾಗಿ ಕಂಡುಬಂದರೆ, ಚಳ್ಳಕೆರೆ ತಾಲ್ಲೂಕಿನ ಕಾಟಪ್ಪನಹಟ್ಟಿಯ ಕಾಟಂಲಿಂಗೇಶ್ವರ, ಗೌರಸಮುದ್ರದ ಬೊಮ್ಮಲಿಂಗೇಶ್ವರ, ಓಬನಹಳ್ಳಿಯ ಪಾಮುಡ್ಲು ಬೆಡಗಿನ ಪಾಮುಡ್ಲು ಗುರುನಾಥ, ಇನ್ನೂ ಮುಂತಾದ ದೈವಗಳು ಈ ಭಾಗದಲ್ಲಿ ಪ್ರಮುಖ ದೈವಗಳಾಗಿ ಗುರುತಿಸಿಕೊಂಡಿವೆ. ಇದೇ ರೀತಿ ಯಾದವ ಸಂತತಿಯಿಂದ ಬಂದಂತ ಕಾಡುಗೊಲ್ಲರಲ್ಲೂ ಸಹಾ ದೈವಗಳು ಕಂಡುಬರುತ್ತವೆ. ಚಳ್ಳಕೆರೆ ಭಾಗದಲ್ಲಿ ಇವರು ಪೂಜಿಸುವ ದೈವಗಳು ಕದರಿನರಸಿಂಹ ಸ್ವಾಮಿ, ಜುಂಜಪ್ಪ (ಕರಡಿಗೊಲ್ಲರ ಮನೆದೇವರು), ಎತ್ತಪ್ಪ, ಚಿತ್ತಪ್ಪ, ಹಾಲಪ್ಪ, ಚಿಕ್ಕಣ್ಣಸ್ವಾಮಿ, ಬಂಜಿಗೆರೆ ಈರಣ್ಣ, ಸಿದ್ದಯ್ಯ, ಕಾಟಪ್ಪ, ಈರಮುದ್ದಪ್ಪ, ನಾಗಪ್ಪ, ಭೂತಪ್ಪ, ಪಾತಪ್ಪ, ಕ್ಯಾತಪ್ಪ, ತಿಮ್ಮಪ್ಪ, ಚಿತ್ರದೇವರುಇನ್ನೂ ಮುಂತಾದ ದೈವಗಳನ್ನು ಈ ಭಾಗದಲ್ಲಿ ಪೂಜಿಸುತ್ತಾರೆ.ಈ ರೀತಿಯ ದೈವಗಳನ್ನು ಆಚರಿಸುವುದರೊಂದಿಗೆ ವಿಷ್ಣು ಆರಾಧಕರಾಗಿ ಗುರುತಿಸಿಕೊಂಡರೂ ಸಹಾ ಇವರು ಶೈವದೈವಗಳನ್ನು ಪೂಜಿಸುವುದರೊಂದಿಗೆ ಶೈವ ಆರಾಧಕರಾಗಿಯು ಗುರುತಿಸಿಕೊಂಡಿದ್ದಾರೆ.ಶಿವನ ಆರಾಧಕರು ಹಣೆಗೆ ನಾಮವನ್ನು ಇಟ್ಟರೆ, ವಿಷ್ಣು ಆರಾಧಕರು ವಿಭೂತಿಯನ್ನು ಇಡುತ್ತಾರೆ.

ಈ ಬುಡಕಟ್ಟುಗಳು ತನ್ನ ಸಮುದಾಯದ ಹೇಳಿಗೆಗೆ ಶ್ರಮಿಸಿದ ಸಾಂಸ್ಕೃತಿಕ ವೀರರ ವಸ್ತುಗಳನ್ನು ಪೂಜಿಸುವುದು ಹೆಚ್ಚಾಗಿ ಕಂಡುಬರುತ್ತದೆ. ಉದಾ: ಮ್ಯಾಸಬೇಡರ ಪ್ರಮುಖ ದೈವವಾದ ಚಳ್ಳಕೆರೆ ತಾಲ್ಲೂಕಿನ ಹಿರೇಹಳ್ಳಿಯಲ್ಲಿ ನೆಲೆಸಿರುವ ದಡ್ಡಿಸೂರನಾಯಕನ ದೇವಸ್ಥಾನದ ಗರ್ಭ ಗುಡಿಯಲ್ಲಿ ದಡ್ಡಿಸೂರನಾಯಕನ 'ಹಲಗು' ಇದೆ. ಇದನ್ನು ಪ್ರಸ್ತುತ ದಿನಮಾನದವರಿಗೂ ಯಾರು ನೋಡಿಲ್ಲ, ಈ ಹಲಗು ತನ್ನ ತಂದೆ ರೆಪ್ಪಲಸೂರಿ ಕೊಟ್ಟ ಹಲಗು ಇದನ್ನು ದಡ್ಡಿಸೂರನಾಯಕ ಬದುಕಿದ್ದ ಕಾಲದಲ್ಲಿ ಪೂಜಿಸುತ್ತಿದ್ದನಂತೆ, ಕಾಲನಂತರ ಈ ಹಲಗಿನ ಮೇಲೆ 'ಉತ್ತ' ಬೆಳೆದು ಇಂದು ಈ 'ಉತ್ತ' ದ ಸುತ್ತ ಗರ್ಭಗುಡಿಯನ್ನು ಕಟ್ಟಿ ಮ್ಯಾಸಬೇಡರ 'ನಲಬಾಪುಲು' ಎಂಬ ಪ್ರಮುಖ ಬೆಡಗಿನವರು ಆರಾಧಿಸುತ್ತಾರೆ. ಕಲ್ಲು ಬೆನವಗಳನ್ನು ಮತ್ತು ದೈವ ನೆಲಸಿದ ಮರಗಳನ್ನು ಅದರಲ್ಲೂ ವಿಶೇಷವಾಗಿ ಬೇವಿನ ಮರಗಳನ್ನು ಗತಿಸಿ ಹೋದ ಹಿರಿಯರನ್ನು, ವೀರ ನಾಯಕರನ್ನು ಪೂಜಿಸುವ ಸಂಪ್ರದಾಯ ಇದೆ. ಬುಡಕಟ್ಟು ಸಮುದಾಯದ ಕೆಲವು ದೈವಗಳು ಪೆಟ್ಟಿಗೆ ದೇವರುಗಳಿಗೆ ನಾಗಾಭರಣದ ಅಲಂಕಾರವಿರುತ್ತದೆ. ಹೀಗಾಗಿ ಇವರು ಹುತ್ತವನ್ನು, ಸರ್ಪವನ್ನು, ಹುತ್ತದ ರೂಪದಲ್ಲೇ ಆರಾಧನೆ ಮಾಡುತ್ತಾರೆ. ಉದಾ: ಗೌರಸಂದ್ರ ಮಾರಮ್ಮನನ್ನು ಹುತ್ತವನ್ನು ಪೂಜಿಸುತ್ತಾರೆ. ಚಿತ್ರದುರ್ಗ ಜಿಲ್ಲೆಯ ಹಲವು ಗೊಲ್ಲರಹಟ್ಟಿ ಮತ್ತು ಮ್ಯಾಸಬೇಡರ ಹಟ್ಟಿಗಳಲ್ಲಿ ದೇವರು, ಧರ್ಮ, ಸಂಸ್ಕೃತಿ, ಸಂಪ್ರದಾಯ, ನಂಬಿಕೆ, ಆಚರಣೆಗಳಲ್ಲಿ ಪರಸ್ಪರ ಸಾಮ್ಯತೆಗಳು ಕಂಡುಬರುತ್ತವೆ. ಮ್ಯಾಸಬೇಡರ ದೇವರು, ಬೆಡಗು, ಭಾಷೆ, ಕಲೆ, ಮತ್ತು ಸಾಹಿತ್ಯವನ್ನು ಗಮನಿಸಿದರೆ ಇವರು ಮೂಲತಃ ಆಂಧ್ರಪ್ರದೇಶದ

‘ಅಡವಿಚೆಂಚರು’ ಅಥವಾ ‘ಕಾಡುಸಂಚರು’ ಸಂಸ್ಕೃತಿಗಳು ಇವರಲ್ಲೂ ಕಂಡುಬರುತ್ತವೆ. ವಿಷ್ಣುವಿನ ನಾಲ್ಕನೇ ಅವತಾರವಾದ ‘ನರಸಿಂಹ’ ಅಡವಿ ಚೆಂಚರ ಕನ್ಯೆಯೊಬ್ಬಳನ್ನು ಮೋಹಿಸಿ ಮದುವೆಯಾಗಿದ್ದು, ಚೆಂಚು ಹುಡಿಗಿಯೊಂದಿಗಿನ ತೆಲುಗು ಭಾಷೆಯ ಸಂಭಾಷಣೆ, ಓಬಳ ನರಸಿಂಹನನ್ನು ತಮ್ಮ ಅಳಿಯನೆಂದು ಭಾವಿಸಿ ‘ಅಡವಿಚೆಂಚು’ ಜನಾಂಗ ಪೂಜಿಸುವುದು, ಈ ಅಳಿಯ ದೇವರು ಎಂಬುದು ಅಪಭ್ರಂಶುವಾಗಿ ‘ಮನೆದೇವರು’ ಎಂಬುದಾಗಿ ರೂಪಾಂತರ ಹೊಂದಿದೆ ಎಂದು ೧೯೦೯ ರಲ್ಲಿ ಎಡ್ಗರ್ ಥರ್‌ಸ್ಟನ್ ಮತ್ತು ಕೆ. ರಂಗಾಚಾರಿ ರವರು “caste and tribes of southern india” ಎಂಬ ಕೃತಿಯಲ್ಲಿ ವಿವರವಾಗಿ ಕೊಟ್ಟಿರುವುದು ಸರಿಯಾಗಿಯೇ ಇದೆ. ಈ ಅಡವಿಚೆಂಚು ಬುಡಕಟ್ಟಿನ ಎಲ್ಲಾ ಗುಣಲಕ್ಷಣಗಳು ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡರಲ್ಲಿ ಕಂಡುಬರುತ್ತವೆ.

ಬೆತ್ತದ ಬುಟ್ಟಿ ದೇವರುಗಳು : ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ಸಾಲಿಗ್ರಾಮ ಮತ್ತು ಲಿಂಗಗಳನ್ನು ಪ್ರತ್ಯೇಕವಾಗಿ ಕಟ್ಟಿ ಬೆತ್ತದ ಬುಟ್ಟಿಗಳಲ್ಲಿಟ್ಟು, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುಲಭವಾಗಿ ತಲೆಯ ಮೇಲೆ ಹೊತ್ತುಕೊಂಡು ಹೊಗುವಂತೆ, ಅಲೆಮಾರಿ ಜೀವನಕ್ಕೆ ಅನುಕೂಲವಾಗುವಂತೆ ಪೆಟ್ಟಿಗೆ ದೇವರುಗಳು ‘ಹಟ್ಟಿ’ ಗಳಲ್ಲಿ ಕಂಡುಬರುತ್ತವೆ. ಸಂಚಾರಿ ಬೇಟೆ, ಪಶುಪಾಲನೆ ಮತ್ತು ಕೃಷಿಯಲ್ಲಿ ತೊಡಗಿದ್ದ ಈ ಬುಡಕಟ್ಟುಗಳು ಮೊದ ಮೊದಲು ಎಲ್ಲಿಯು ವಿಗ್ರಹಗಳನ್ನಾಗಲಿ, ದೇವಸ್ಥಾನಗಳನ್ನಾಗಲಿ ಕಟ್ಟಿದಂತೆ ಕಂಡುಬರುತ್ತಿಲ್ಲ. ಅಲೆಮಾರಿ ಬದುಕಿಗೆ ಅನುಕೂಲವಾಗಲೆಂದೇ ಬೆತ್ತದ ಬುಟ್ಟಿಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಪ್ರಸ್ತುತ ದಿನಗಳಲ್ಲಿ ಆಧುನಿಕತೆಯ ಪ್ರಭಾವದಿಂದ ದೇವರ ಗುಬ್ಬಗಳು ಕಣ್ಮರೆಯಾಗಿ ಆಧುನುಕ ಶೈಲಿಯಲ್ಲಿ ಕಬ್ಬಿಣ ಸಿಮೆಂಟುಗಳ ಮಿಶ್ರಣದಿಂದ ಟೈಲ್ಸ್‌ಬಂಡೆಗಳಿಂದ ನಿರ್ಮಾಣಗೊಲ್ಲಲು ತಲೆಎತ್ತಿವೆ. ಕಲ್ಲಿನ ದೇವಸ್ಥಾನಗಳ ನಿರ್ಮಾಣಕ್ಕೆ ಕೆಲವು ಬೆಡಗುಗಳಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ. ಉದಾ: ಚಳ್ಳಕೆರೆ ತಾಲ್ಲೂಕಿನ ಹೀರೆಹಳ್ಳಿಯಲ್ಲಿ ಮ್ಯಾಸಬೇಡರ ‘ದಡ್ಡಿಸೂರನಾಯಕ’ ಎಂಬ ಬುಡಕಟ್ಟು ಸಂಸ್ಕೃತಿಯ ಹಳೇಕಾಲದ ಗರ್ಭಗುಡಿಯನ್ನು ತೆರವುಗೊಳಿಸಿ ಆಧುನಿಕ ಶೈಲಿಯಲ್ಲಿ ಕಟ್ಟಲು ಪ್ರಾರಂಭಿಸಿದಾಗ ಅಲ್ಲಿನ ದೇವರ ಮಹಿಮೆಯಿಂದ ಗರ್ಭಗುಡಿಗೆ ಬೆಂಕಿಬಿದ್ದಿದ್ದುತ್ತು ಎಂದು ದಡ್ಡಿಸೂರನಾಯಕನ ಅನುಯಾಯಿ ಕೂಡ್ಲಿಗಿ ತಾಲ್ಲೂಕಿನ ಚೌಟಯ್ಯನಹಟ್ಟಿಯ ಹಿರಿಯ ವಕ್ತೃವಾದ ಮಾಳಿಗೆ ಈಶ್ವರಪ್ಪಎಂಬ ವ್ಯಕ್ತಿ ತಿಳಿಸಿದ್ದಾರೆ. ಈ ದೇವಸ್ಥಾನಕ್ಕೆ ಬೆಂಕಿಬಿದ್ದಿರುವುದು ಅಲ್ಲಿನ ದೇವರ ಸತ್ಯದಿಂದ ಈ ಘಟನೆಯಾಗಿದೆ, ಆ ದೇವರಿಗೆ ಹಳೇಕಾಲದ ಗುಡಿಯೇ ಲೇಸಾಗಿರುವುದರಿಂದ ಗರ್ಭಗುಡಿಯನ್ನು ಹಾಗೆ ಇಟ್ಟು ಹೊರಗಡೆ ಗೋಪುರ ಕಮಾನುಗಳನ್ನು ಕಟ್ಟಿದ್ದಾರೆ.ಇವರ ದೇವರುಗಳು ಕಲ್ಲಿನ ಕಟ್ಟಡಕ್ಕಿಂತ ಹಂಚಿ ಗುಡಿಸಲು, ಬಾಳೆಪಟ್ಟೆ ಗುಡಿಸಲುಗಳನ್ನೇ ಇಷ್ಟಪಡುತ್ತವೆ, ಎಂದು ಈ ಊರಿನ ಮ್ಯಾಸಬೇಡ ಜನಾಂಗದ ಅಭಿಪ್ರಾಯವಾಗಿದೆ.

ಸುಮಾರು ೧೮ ಅಂಗುಲ ಎತ್ತರ ೨೮ ಅಂಗುಲ ಸುತ್ತಳತೆ ಹೊಂದಿದ ವೃತ್ತಾಕಾರದ ಮತ್ತು ಚೌಕಾಕರದ ಬೆತ್ತದ ಬುಟ್ಟಿಗಳನ್ನು ಕಲಾತ್ಮಕವಾಗಿ ಹೆಣದಿರುತ್ತಾರೆ, “ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆ ಓಬಳದೇವರು ಮತ್ತು ಯಲಗಟ್ಟೆ ಗಾದ್ರಿಪಾಲನಾಯಕ ದೇವರು ಬೆತ್ತದ ಬುಟ್ಟಿಗಳನ್ನು ಒಂದೆ ಬಾರಿ ತಯಾರಿಸಿದ್ದಾರೆ.ಮೂಕನಾಗಿದ್ದ ದೇವರಮರಿಕುಂಟೆಯ ಒಬ್ಬ ಬ್ರಾಹ್ಮಣ ಜೇನು ತುಪ್ಪದಲ್ಲಿ ಬೆತ್ತ ನೆನೆಹಾಕಿ ಕಲಾತ್ಮಕವಾಗಿ ಈ ಎರಡು ಬುಟ್ಟಿಗಳನ್ನು ಹೆಣದಿದ್ದಾನೆ.” ಈ ಮಾಹಿತಿ ಚಳ್ಳಕೆರೆ ತಾಲ್ಲೂಕಿನ ಯಾದಲಗಟ್ಟೆ ಗೊಲ್ಲರಹಟ್ಟಿಯ ಯುವರಾಜ ಎಂಬ ವ್ಯಕ್ತಿ ಈ ಮಾಹಿತಿಯನ್ನು ತಿಳಿಸಿದ್ದಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಟ್ಟಿಗಳು ಒಂದೇ ತೆರನಾಗಿ ಇರುವುದು ಕಂಡುಬರುತ್ತವೆ. ಈ ದೇವರ ಬುಟ್ಟಿಗಳಲ್ಲಿ ಏನಿದೆ ಎಷ್ಟು ಬುಟ್ಟಿಗಳಿವೆ ಅವುಗಳ ರಚನೆ, ಆಕಾರ ವಿನ್ಯಾಸ ಬಗ್ಗೆ ಎಷ್ಟೋ ಪೂಜಾರಿಗಳಿಗೆ ಗೊತ್ತಿರುವುದಿಲ್ಲ. ಕೆಲವೊಂದು ದೇವರ ಬುಟ್ಟಿಗಳಲ್ಲಿ ಒಂದೇ ಬುಟ್ಟಿಯಿದ್ದು ಅದರಲ್ಲಿ ಸಾಲಿಗ್ರಾಮ, ಲಿಂಗ ತ್ರಿಶೂಲ, ನಾಗರ ಏಡೆ, ಮುಂತಾದ ದೇವರ ಪರಿಕರಗಳು ಇರುತ್ತವೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ದೇವರುಗಳ ಬೆತ್ತದ ಬುಟ್ಟಿಗಳು ವೃತ್ತಾಕಾರ ಮತ್ತು ಚೌಕಾಕಾರ ಇಲ್ಲವೇ ಅಡ್ಡ ಪೆಟ್ಟಿಗೆಗಳಂತೆ ಕಂಡುಬರುತ್ತವೆ. ಈ ಬೆತ್ತದ ಬುಟ್ಟಿಗಳಿಗೆ ಕಲಾತ್ಮಕವಾದ ಕೆಂಪು ರೇಷ್ಮೆ ವಸ್ತ್ರವನ್ನು ಮುಚ್ಚಿ ಅದರ ಮೇಲುಗಡೆ ಒಂದು ಕಳಸವಿಟ್ಟು ಹತ್ತಿ ದಾರದಿಂದ ಮಂದಾಸನದ ಕಾಲುಗಳಿಗೆ ಬಿಗಿಯಾಗಿಕಟ್ಟಿ, ಬೆತ್ತದ ಬುಟ್ಟಿಯ ಮಧ್ಯಭಾಗಕ್ಕೆ ಬೆಳ್ಳಿಯ ಪಟ್ಟಿಯನ್ನು ಕಟ್ಟಿ ಈ ಪೆಟ್ಟಿಗೆ ಹೊಂದಿಕೊಂಡಂತೆ ದೇವರ ಆಭರಣಗಳನ್ನು ತೊಡಿಸಿ ಅಲಂಕಾರಕ್ಕಾಗಿ ಹೊಂಬಾಳೆ ಮತ್ತು ಹೂವುಗಳನ್ನು ಈ ಬೆತ್ತದ ಬುಟ್ಟಿಯ ಸುತ್ತ ಇಳೆ ಬಿಟ್ಟಿರುತ್ತಾರೆ. ಮ್ಯಾಸಬೇಡರ ಪೆಟ್ಟಿಗೆ ದೇವರುಗಳು

1. ನಲಜರುವ ಒಬಳದೇವರು - ರುದ್ರಮ್ಮನಹಳ್ಳಿ, ಚಳ್ಳಕೆರೆ ತಾಲೂಕು
2. ಕಾಟಂಲಿಂಗೇಶ್ವರ - ಕಾಟಪ್ಪನಹಟ್ಟಿ, ಚಳ್ಳಕೆರೆ ತಾಲೂಕು
3. ಬೊಮ್ಮಲಿಂಗೇಶ್ವರ - ಗೌರಸಮುದ್ರ, ಚಳ್ಳಕೆರೆ ತಾಲೂಕು
4. ದಡ್ಲುಮಾರಮ್ಮ - ದೇವರಹಳ್ಳಿ, ಚಳ್ಳಕೆರೆ ತಾಲೂಕು
5. ಬಂಗಾರುದೇವರು - ಬಂಗಾರುದೇವರಹಟ್ಟಿ, ಚಳ್ಳಕೆರೆ ತಾಲೂಕು
6. ಪೆದ್ದತಿರುಮಲ ದೇವರು - ಬೆಡರೆಡ್ಡಿಹಳ್ಳಿ, ಚಳ್ಳಕೆರೆ ತಾಲೂಕು
7. ರಾಜಲದೇವರು - ಮಲ್ಲೂರಹಳ್ಳಿ, ಚಳ್ಳಕೆರೆ ತಾಲೂಕು

ಇನ್ನೂ ಮುಂತಾದ ದೇವರುಗಳನ್ನು ಮ್ಯಾಸಬೇಡರು ಆರಾಧಿಸುತ್ತಾರೆ.ಇಲ್ಲಿ ಕೆಲವನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗುವುದು.

**ಕಾಡುಗೊಲ್ಲರ ಮನೆದೇವರುಗಳು:** ಅಜ್ಜಪ್ಪ, ಅಕ್ಕಮ್ಮ, ಈರಣ್ಣ, ಈರಧಾಸಣ್ಣ, ಎತ್ತಪ್ಪ, ಏಳುಮುದ್ದಪ್ಪ, ಒಬಳನರಸಿಂಹ, ಕಂಪಿಲರಾಯ ಕದರಪ್ಪ, ಕದರಿನರಸಿಂಹ, ಕರಿಯಮ್ಮ, ಕಾಟಂಲಿಂಗೇಶ್ವರ, ಕ್ಯಾತೇಲಿಂಗೇಶ್ವರ, ಗಾದ್ರಿಲಿಂಗೇಶ್ವರ ಗೌರಸಮುದ್ರ ಮಾರಮ್ಮ, ಗೊಲ್ಲಾಳಮ್ಮ, ಗೋಪಾಲಸ್ವಾಮಿ, ಗೋವಿಂದಶ್ವಾಮಿ, ಚಿಕ್ಕಣ್ಣ, ಚಿತ್ತಪ್ಪ ಚಿತ್ರದೇವರು, ಚಿತ್ರಲಿಂಗೇಶ್ವರ, ಜುಂಜಪ್ಪ, ತಾಳಿದೇವರು, ತಿಮ್ಮಪ್ಪ, ನಾಗಪ್ಪ, ಪಾತಪ್ಪ, ಪಾತಲಿಂಗೇಶ್ವರ ಪರ್ಲಹಳ್ಳಿ ಭೂತಪ್ಪ, ಬಂಜಿಗೆರೆ ವೀರಣ್ಣ, ಬಾಲದೇವರು, ಮಲ್ಲಯ್ಯ, ಮಲ್ಲಿಕಾರ್ಜುನ, ಮಾಯಸಂದ್ರ ಕರಿಯಮ್ಮ, ರ್‍ರಪ್ಪಸ್ವಾಮಿ, ಯರಬಳ್ಳಿ ಮಾರಕ್ಕ, ಯಲ್ಲಮ್ಮದೇವಿ, ರಂಗಸ್ವಾಮಿ, ರಾಮಲಿಂಗೇಶ್ವರ ಲಕ್ಷ್ಮೀನರಸಿಂಹ, ವೀರನಾಗಣ್ಣ, ವೀರಕರಿಯಣ್ಣ, ವೀರಮಾರಣ್ಣ, ವೀರಭದ್ರಸ್ವಾಮಿ, ಸಿದ್ದಪ್ಪ ಸಿರಿಯಣ್ಣ, ಸಿಂಪಣ್ಣ, ಸುಂಕ್ಲಮ್ಮ, ಶ್ರೀಕೃಷ್ಣ, ಹಾಲುಕುಡಿದಸ್ವಾಮಿ, ಹಾಲುಗುಡ್ಡದಪ್ಪ, ಹಾಲುದೇವರು, ಹಾಲುರಾಮೇಶ್ವರ ಇನ್ನೂ ಮುಂತಾದ ದೈವಗಳನ್ನು ಕಾಡುಗೊಲ್ಲರು ಆರಾಧ್ಯದೈವಗಳಾಗಿ ಪೂಜಿಸುವುದು ಚಿತ್ರದುರ್ಗ ಜಿಲ್ಲೆಯಾದ್ಯಂತ ಕಂಡುಬರುತ್ತದೆ. ಈ ಮೇಲಿನ ಕೆಲವು ದೈವಗಳು ಬ್ರಹ್ಮ ವಿಷ್ಣುವಿನಿಂದ ಉಗಮಗೊಂಡು, ಉಳಿದ ಕೆಲವು ದೈವಗಳು ತನ್ನ ಸಮುದಾಯ ಕುಟುಂಬದ ಹಿರಿಯ ವ್ಯಕ್ತಿಗಳು ಸತ್ತ ನಂತರ ಅವರನ್ನು ಪೂಜಿಸುವ ಮತ್ತು ಅವರನ್ನು ದೈವಕ್ಕೆ ಏರಿಸಿ ಅವರಿಗೆ ಒಂದು ಆಕಾರಕೊಟ್ಟು ಅವರಲ್ಲಿ ದೈವ ಸ್ವರೂಪವನ್ನು ಕಂಡು ಪೂಜಿಸುವ ಪದ್ಧತಿ ಕಾಡುಗೊಲ್ಲರಲ್ಲಿ ಅಷ್ಟೇ ಅಲ್ಲದೇ ಮ್ಯಾಸಬೇಡ ಬುಡಕಟ್ಟಿನಲ್ಲೂ ಸಹಾ ಇದೇ ರೀತಿ ಕಂಡುಬರುತ್ತದೆ. ಇವೆರಡರಲ್ಲೂ ಸಹಾ ಸಾಂಸ್ಕೃತಿಕ ವೀರರನ್ನು ಗುರುತಿಸಬಹುದು. ಪಿತೃಪ್ರಧಾನದ ಮೂಲಕ ಪಾರಂಪಾರಿಕವಾಗಿ ತಮ್ಮ ಪೂರ್ವಜರನ್ನು ಆರಾಧಿಸಿಕೊಂಡು ಅವರನ್ನು ದೈವತ್ವಕ್ಕೆ ಏರಿಸುವುದು ಬುಡಕಟ್ಟುಗಳ ಸಂಸ್ಕೃತಿಯಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು ತಮ್ಮ ಸಮುದಾಯ ದೈವಗಳನ್ನು ಮತ್ತು ಸಾಂಸ್ಕೃತಿಕ ನಾಯಕರನ್ನು ಪೂಜಿಸುವುದು ಅಷ್ಟೇ ಅಲ್ಲದೇ ಇತರೆ ಮೂಲದ ದೈವಗಳನ್ನೂ ಸಹಾ ಪೂಜಿಸುವುದು ಕಂಡುಬರುತ್ತದೆ. ಉದಾ: ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ, ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ಮತ್ತು ಮೊಳಕಾಲ್ಮೂರು ತಾಲ್ಲೂಕಿನ ನುಂಕಿಮಲೆಸಿದ್ದೇಶ್ವರ ಚಿತ್ರದುರ್ಗದ ವ್ಯಾಪ್ತಿಗೆ ಸೇರಿರುವುದರಿಂದ ಇಲ್ಲಿ ಅತಿ ಹೆಚ್ಚಾಗಿ ಕಂಡುಬರುವ ಬುಡಕಟ್ಟುಗಳು ಇವೆರಡೆ, ಈ

ಬುಡಕಟ್ಟುಗಳಿಗೂ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿಗೂ ಮತ್ತು ನುಂಕಿಮಲೆಸಿದ್ದೇಶ್ವರನಿಗೂ ಇರುವ ದೈವಸಂಬಂಧವನ್ನು ಗುರುತಿಸಿ ಮತ್ತು ಇವೆರಡು ಬುಡಕಟ್ಟುಗಳು ಈ ದೈವಗಳ ಆಚರಣೆಯಲ್ಲಿ ತಮ್ಮ ಪಾತ್ರವೇನು ಎಂಬುದನ್ನು ತಿಳಿಸಲಾಗುವುದು. ನಾಯಕನಹಟ್ಟಿ ತಿಪ್ಪೇಸ್ವಾಮಿಯು ಯಾವ ಬುಡಕಟ್ಟಿಗೆ ಸೇರಿದವನು ಎಂಬುದರ ಬಗ್ಗೆ ತುಂಬಾ ಗೊಂದಲಗಳಿವೆ, ಏಕೆಂದರೆ ಹೊರಮಠದ ಪೂಜಾಪದ್ಧತಿಗಳು ಬುಡಕಟ್ಟು ಪದ್ಧತಿಯಲ್ಲಿಯೇ ನಡೆಯುತಿದ್ದು. ತಿಪ್ಪೇಸ್ವಾಮಿ ಜೀವೈಕ್ಯನಾಗಿನ ಮ್ಯಾಸಬೇಡರಿಂದಲೇ ಪೂಜೆ ಮಾಡಿಸಿಕೊಳ್ಳುತ್ತಿರುವುದರಿಂದ ತಿಪ್ಪೇಸ್ವಾಮಿ ವೀರಶೈವನಾಗಿದ್ದರೂ ಇದರಿಂದ ಹೊರಬರಲು ಪ್ರಯತ್ನಿಸಿದ ಪ್ರಯತ್ನಗಳು ಗಮನಾರ್ಹವಾಗಿದ್ದು ಮತ್ತು ಜಾತ್ರೆಯ ಸಂದರ್ಭದಲ್ಲಿ ಹೊರಮಠಕ್ಕೆ ಮಾಂಸದ ಊಟವನ್ನು ನೈವೇದ್ಯಕ್ಕೆ ಬಳಸುವುದರೊಂದಿಗೆ ಇವನು ಮ್ಯಾಸಬೇಡ ಬುಡಕಟ್ಟಿನವನಾಗಿರಬಹುದು ಇದರಿಂದ ಮ್ಯಾಸಬೇಡರು ತಿಪ್ಪೇಸ್ವಾಮಿಯನ್ನು ಕುಲಗುರು ಕರೆದಯಕೊಳ್ಳುತ್ತಾರೆ. ಎಂಬುದು ನನ್ನಅಭಿಪ್ರಾಯವಾಗಿದೆ.

ಹಾಗೆಯೇ ಡಾ, ಮೀರಾಸಾಬಿಹಳ್ಳಿ ಶಿವಣ್ಣರ ಅಭಿಪ್ರಾಯವುಕೂಡ ಇದೇ ಆಗಿದೆ ತಿಪ್ಪೇಸ್ವಾಮಿ ಪಶುಪಾಲಕನಾಗಿರುವುದಕ್ಕೆ ಸತ್ತ ಎಮ್ಮೆಯನ್ನು ಬದಿಕಿಸುವಷ್ಟು ಕರುಣಾಮಹಿ ಆಗಿದ್ದನು ಮತ್ತು ಪಶುಪಾಲಕರ ದನದದೊಡ್ಡಿಯ ಗೊಬ್ಬರದ 'ತಿಪ್ಪೇ' ಮತ್ತು ಇವನಿಗಿರುವ ಸಂಬಂಧಗಳನ್ನು ನೋಡಿದರೆ ಇವನು ಬುಡಕಟ್ಟು ಸಂಸ್ಕೃತಿಯ ವ್ಯಕ್ತಿಯೇ ಇರಬಹುದು ಪಶುಪಾಲಕರಿಗೂ ಮತ್ತು 'ತಿಪ್ಪೇ' ಗೂ ಇರುವ ಸಂಬಂಧ ತುಂಬಾ ಅನನ್ಯವಾದದ್ದು. ಹೆಸರಿನ ಮೂಲದಅಧ್ಯಯನವೂ ಅನೇಕ ನಿಗೂಢ ಆಯಾಮಗಳನ್ನು ಬಿಚ್ಚಬಹುದು ಎಂಬುದಕ್ಕೆ ತಿಪ್ಪೇಸ್ವಾಮಿ ಅಷ್ಟೇ ಅಲ್ಲ ಕರ್ನಾಟಕದ ಸಾಂಸ್ಕೃತಿಕ ವೀರರ ಕತೆಗಳಿಗೂ ಇಂತಹ ಸಾಂಸ್ಕೃತಿಕ ಕುತೂಹಲಗಳನ್ನು ಗರ್ಭೀಕರಿಸಿಕೊಂಡಿರುವುದನ್ನು ಗಮನಿಸಬಹುದು.ಮಾದಿಗರ ಮಾದಪ್ಪ ಮಲೆಮಾದೇಶ್ವರನಾಗಿ, ಹೊಲೆಯರ ಮಂಟೇಸ್ವಾಮಿ ಧರೆಗೆ ದೊಡ್ಡವರಾಗಿ ಶೈವೀಕರಣಗೊಂಡ ಕತೆಗಳ ಹಿನ್ನೆಲೆಯಲ್ಲಿ ತಿಪ್ಪೇಸ್ವಾಮಿಯ ಹುಟ್ಟನ್ನು ಪರಿಶೀಲಿಸಬಹುದು.ಇದೇನೇ ಇರಲಿ ಬುಡಕಟ್ಟು ಎಲ್ಲಾ ಅಂಶಗಳನ್ನು ಮೈಗೂಡಿಸಿಕೊಂಡಿರುವ ನಾಯಕನಹಟ್ಟಿ ತಿಪ್ಪೇಸ್ವಾಮಿ ಮ್ಯಾಸಬೇಡ ಮತ್ತುಕಾಡುಗೊಲ್ಲ ಬುಡಕಟ್ಟುಗಳಿಗೆ ಅಧಿದೇವರಾಗಿ ಪೂಜೆಗೆ ಒಳಗಾಗಿದ್ದಾನೆ. ಕಾಡುಗೊಲ್ಲರು ತಿಪ್ಪೇಸ್ವಾಮಿಯ ಆರಾಧಕರು, ಮತ್ತು ಹಬ್ಬ-ಜಾತ್ರೆಗಳಲ್ಲಿ ಗೊಲ್ಲಗೌಡನು ಭಾಗವಹಿಸುವ ಪದ್ಧತಿ, ಸಾಂಪ್ರದಾಯಿಕವಾಗಿ ಮೊದಲಿನಿಂದಲು ಆಚರಿಸಿಕೊಂಡುಬರುತ್ತಿದ್ದಾರೆ. ಈ ಜನಾಂಗದವರು ತಿಪ್ಪೇಸ್ವಾಮಿಯನ್ನು ಆರಾಧ್ಯದೈವವಾಗಿ ಪೂಜಿಸಿದರೆ, ಎತ್ತಪ್ಪ ಜುಂಜಪ್ಪನನ್ನು ಮನೆದೇವರೆಂದು ಪೂಜಿಸುತ್ತಾರೆ.

## ಆಕರ ಗ್ರಂಥಗಳು


1. ಗುರುಲಿಂಗಯ್ಯ ಎಂ, ಮತ್ತು ವಿ. ನಾಗಪ್ಪ ರವರ "ಕಾಡುಗೊಲ್ಲ" ಅಶೋಕ್ ಎನ್, ಚಲವಾದಿ, ಬೆಂಗಳೂರು (೨೦೦೮)
2. ತಾರಿಹಳ್ಳಿ ಹನುಮಂತಪ್ಪ ರವರ "ಕರ್ನಾಟಕದ ಉಗ್ರ ಆಚರಣೆಗಳು" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, (೨೦೧೭)
3. ಬೋರಲಿಂಗಯ್ಯ ಹಿ, ಚಿ. ಮತ್ತು ಎ, ಎಸ್. ಪ್ರಭಾಕರ ರವರ ರಚಿಸಿದ "ಕರ್ನಾಟಕ ಬುಡಕಟ್ಟು ಸಚಿತ್ರ ಸಂಪುಟ" ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ, ಹಂಪಿ (೨೦೧೩).
4. ಮಂಜುನಾಥ ಬೇವಿನಕಟ್ಟಿ ರವರ 'ಕನ್ನಡ ಜನಪದ ನಂಬಿಕೆಗಳು' ಜ್ಯೋತಿ ಪ್ರಕಾಶನ ಮೈಸೂರು (೨೦೦೭)
5. ಮೈತ್ರಿ ಕೆ, ಎಂ, ರವರ 'ಬುಡಕಟ್ಟು ಕುಲಕಸುಬುಗಳು' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ, ಹಂಪಿ (೨೦೦೨)

6. ಮೀರಾಸಾಬಿಹಳ್ಳಿ ಶಿವಣ್ಣ ರವರ "ಕಾಡುಗೊಲ್ಲ ಬುಡಕಟ್ಟು ವೀರರು" ಸಿ, ವಿ, ಜಿ, ಪಬ್ಲಿಕೇಶನ್ ಬೆಂಗಳೂರು (೨೦೦೫)
7. ವಿರೂಪಾಕ್ಷಿ ಪೂಜಾರಹಳ್ಳಿ ರವರ "ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು" ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ, ಹಂಪಿ (೨೦೦೨)
8. ಶಂಕರನಾರಾಯಣ ತಿ ನಂ, ಶ್ರೀ ರವರು "ಕಾಡುಗೊಲ್ಲರ ನಂಬಿಕೆಗಳು ಮತ್ತು ಸಂಪ್ರದಾಯಗಳು" (೧೯೮೨) ಎಂಬ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಪ್ರಕಟಿಸಲಾಗಿದೆ.